# 4

# ಪ್ರಸಂಗಿಗಳು

ನಾನು ಪ್ರಸಂಗಿಗಳಿಂದ ಬಹಳವಾದದ್ದನ್ನು ನಿರೀಕ್ಷಿಸುತ್ತೇನೆ ಹಾಗೂ ಕೇಳುತ್ತೇನೆ. ಇದು ಬೈಬಲಿಗೆ ಅನುಗುಣವಾಗಿದೆ: "... ಯಾವನಿಗೆ ಬಹಳವಾಗಿ ಕೊಟ್ಟಿದೆಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವುದು ..." (ಲೂಕ 12:48). "ಪ್ರಸಂಗಿಯ ಅತಿ ಮುಖ್ಯವಾದ ಕೆಲಸವು ಯಾವುದು?" ಈ ಪ್ರಶ್ನೆಯು ಪೀಠಗಳಲ್ಲಿ, ಕಾಲೇಜ್ ಕ್ಲಾಸುಗಳಲ್ಲಿ, ಪ್ರಸಂಗಿಗಳ ರೀಟ್ರೀಟುಗಳಲ್ಲಿ ಕೇಳಲ್ಪಡಬೇಕು. ನೀವು ಹೇಗೆ ಉತ್ತರ ಕೊಡುತ್ತೀರಿ? ಅಧ್ಯಯನ? ಪ್ರಸಂಗಿಸುವಿಕೆ? ಬೋಧಿಸುವುದು? ಸಂದರ್ಶಿಸುವುದು? ಪ್ರಾಣಗಳನ್ನು ಗೆಲ್ಲುವುದು? ದಯಾಪರತೆ? ಸಮಾಜ ಸಂಬಂಧಗಳು? ಪ್ರಸಂಗಿಯ ಪ್ರಾಥಮಿಕವಾದ ಅತಿ ಹೆಚ್ಚು ಮಹತ್ವದ ಕೆಲಸ ಯಾವುದು? ಬೈಬಲಿನ ಉತ್ತರವು *ಪ್ರಾರ್ಥನೆಯಾಗಿರುತ್ತದೆ.* ಮೊದಲು ಪ್ರಾರ್ಥನೆಯಿಲ್ಲದೆ ಯೇಸುವು ಎಂದೂ ಸೇವೆಯನ್ನು ಪ್ರಾರಂಭಿಸಲಿಲ್ಲ. ಪಂಚಾಶತ್ತಮವು (ಅಪೊಸ್ತಲರ ಕೃತ್ಯಗಳು 2) ಪ್ರಾರ್ಥನೆಯೊಳಗಿಂದ ಬಂದಿತು (ಅಪೊಸ್ತಲರ ಕೃತ್ಯಗಳು 1). ಬೈಬಲಿನ ಪೂರ್ವನಿದರ್ಶನವು ಅಪೊಸ್ತಲರ ಕೃತ್ಯಗಳು 6:4 ಆಗಿರುತ್ತದೆ: "ನಾವಾದರೋ ಪ್ರಾರ್ಥನೆಯನ್ನೂ ವಾಕ್ಯೋಪದೇಶವನ್ನೂ ಮಾಡುವದರಲ್ಲಿ ನಿರತರಾಗಿರುವೆವು." ಅಪೊಸ್ತಲರಿಗೆ, ಪ್ರಾರ್ಥನೆಯು ಪೀಠಕ್ಕಿಂತ ಮೊದಲು ಬಂದಿತು! ತನ್ನ ಬೀಳ್ಕೊಡುಗೆ ಸಂಭಾಷಣೆಗಳಲ್ಲಿ (ಯೋಹಾನ 14-16), ಯೇಸುವು ಪ್ರಾರ್ಥನೆ ಮತ್ತು ಪರಿಶುದ್ಧಾತ್ಮನ ಮೇಲೆ ಕೇಂದ್ರೀಕರಿಸುವದರಿಂದ ವಿಶ್ವಾಸವನ್ನು ಒತ್ತಿ ಹೇಳಿದನು. ಹನ್ನೆರಡು ಜನರಿಗೆ ಯೇಸುವಿಗೆ ಎರಡು ದೊಡ್ಡ ವಾಗ್ದಾನಗಳು ಪ್ರಾರ್ಥನೆ ಮತ್ತು ಪರಿಶುದ್ಧಾತ್ಮ ಆಗಿದ್ದವು. ಇಲ್ಲಿ ನಮ್ಮ ಬಲವಿರುವುದು, ಆದಾಗ್ಯೂ ನಾವು ಪ್ರಾರ್ಥಿಸಲು ಸೋತುಹೋಗುವೆವು! ದೇವರು ಮಾತ್ರವೇ ಒಂದು ಸಭೆಯನ್ನು ಕಟ್ಟಬಲ್ಲನು! ದೇವರ ಸಭೆಯು ಮನುಷ್ಯನಿಂದ ಕಟ್ಟಲ್ಪಡಲಾರದು ಇಲ್ಲವೇ ಮನುಷ್ಯನ ಮೇಲೆ ಕಟ್ಟಲ್ಪಡಲಾರದು. ಪ್ರಾರ್ಥನೆಯು ನಮ್ಮ ಯೋಜನೆಗಳನ್ನು ಆಶೀರ್ವದಿಸಲು ದೇವರನ್ನು ಕೇಳಿಕೊಳ್ಳುವದಿಲ್ಲ. ಪ್ರಾರ್ಥನೆಯು ದೇವರು ತಾನು ಕೆಲಸ ಮಾಡುವಲ್ಲಿ ನಮ್ಮನ್ನು ಇಡಬೇಕೆಂದು ಆತನನ್ನು ಕೇಳುವುದಾಗಿದೆ. ಪ್ರಾರ್ಥನೆಯಿಲ್ಲದಿರುವಂಥದ್ದು ಅನೇಕ ಸಭೆಗಳ ಗುಣಲಕ್ಷಣವಾಗಿರುತ್ತದೆ! ಸಭೆಯಲ್ಲಿ ಇಂದು ಅತ್ಯಂತ ಅವಸರದ ಅಗತ್ಯತೆಯು ನವೀನತೆ, ವರ, ಇಲ್ಲವೇ ನೂತನ ವಿಚಾರಗಳಾಗಿರುವುದಿಲ್ಲ - ಪ್ರಾರ್ಥನೆಯು ಅತ್ಯವಶ್ಯಕವಾದದ್ದಾಗಿರುತ್ತದೆ! ಪ್ರಸಂಗಿಗಳಿಗೆ ಅವರ ಮೇಜುಗಳ ಮೇಲೆ ಇರತಕ್ಕ ಸಂಕೇತವು: "ಮೊದಲು ಪ್ರಾರ್ಥಿಸು."

ಅನೇಕ ಪ್ರಸಂಗಿಗಳು ಸ್ವಲ್ಪ ಪ್ರಾರ್ಥಿಸುವುದು ಇಲ್ಲವೇ ಪ್ರಾರ್ಥಿಸದೇ ಇರುವಂಥದ್ದು ದುಃಖಕರವಾದ ಸಂಗತಿಯಾಗಿದೆ. ದೇವರ ಬಗ್ಗೆ ಮನುಷ್ಯನೊಂದಿಗೆ ಮಾತಾಡುವ ಮೊದಲು ನಾವು ಮನುಷ್ಯನ ಬಗ್ಗೆ ದೇವರೊಂದಿಗೆ ಮಾತಾಡತಕ್ಕದ್ದು. "ನಾನು ಅತಿಯಾಗಿ ಪ್ರಸಂಗಿಸಿದ್ದೇನೆ ಮತ್ತು ಬಹಳ ಅಲ್ಪವಾಗಿ ಅಧ್ಯಯನ ಮಾಡಿದ್ದೇನೆ" ಎಂದು ಬಿಲ್ಲಿಗ್ರಹಾಂ ಅರಿಕೆ ಮಾಡಿದರು. "ನಾನು ಅತಿಯಾಗಿ ಪ್ರಸಂಗಿಸಿದ್ದೇನೆ ಮತ್ತು ಬಹಳ ಅಲ್ಪವಾಗಿ ಪ್ರಾರ್ಥಿಸಿದ್ದೇನೆ" ಎಂದು ನಾನು ಕೂಡಿಸುತ್ತೇನೆ. ಸಹೋದರರು ಸಾಮಾನ್ಯವಾಗಿ, "ಪ್ರಸಂಗಿಗೆ ಸಿದ್ಧವಾದ ಜ್ಞಾಪಕವನ್ನು ಕೊಡು" ಎಂದು ಪ್ರಾರ್ಥಿಸುತ್ತಾರೆ. ಪ್ರಸಂಗಿಗಳಿಗೆ ಅದಕ್ಕಿಂತ ಹೆಚ್ಚಿನ ಅಗತ್ಯತೆಯಿದೆ! ಬಹ

ಆಷ್ಟು ಪ್ರಸಂಗಿಗಳು ಓದುವುದಿಲ್ಲ, ಅಧ್ಯಯನ ಮಾಡುವದಿಲ್ಲ, ಯೋಚಿಸುವದಿಲ್ಲ! ಇದು ದುಃಖಕರವಾದ ಸಂಗತಿಯಾಗಿರುತ್ತದೆ. ಇಂಥ ವಿಷಯಗಳಲ್ಲಿ ಪ್ರಾರ್ಥನೆಯು ಅವರನ್ನು ಕಾಪಾಡುವದಿಲ್ಲ! ಪ್ರಾರ್ಥಿಸುವ ಪ್ರಸಂಗಿಗಳು ಪರಿಶುದ್ಧ ಬರಹಗಳಲ್ಲಿ ಆಳವಾಗಿರುತ್ತಾರೆ. ''ವಾಕ್ಯದೊಳಗೆ'' ಇರುವ ಪ್ರಸಂಗಿಗಳು ಪ್ರಾರ್ಥಿಸುವರು. ಪ್ರಾರ್ಥನೆಯನ್ನು ಪರಿಶುದ್ಧ ಬರಹಗಳಿಂದ ನಾವು ಬೇರೆ ಮಾಡಲಾರೆವು. ಪ್ರಾರ್ಥನೆಯ ಮನುಷ್ಯನು ಮಾತ್ರವೇ ಬೈಬಲನ್ನು ಅರ್ಥಮಾಡಿಕೊಳ್ಳಬಲ್ಲನು. ತನ್ನ ಮೊಣಕಾಲುಗಳ ಮೇಲೆ ಮನುಷ್ಯನು ಏನಾಗಿರುವನೋ ಎಲ್ಲವೂ ಅವನಾಗಿರುವನು. ಪ್ರಸಂಗಿಗಳು ಉಪವಾಸಮಾಡುವುದಕ್ಕಿಂತ ಹೆಚ್ಚಾಗಿ ಸ್ನೇಹ ಪಾರ್ಟಿಗಳಲ್ಲಿ ಭಾಗವಹಿಸುವದರಲ್ಲಿ, ಆರಾಧನೆಗಿಂತ ವಿನೋದದಲ್ಲಿ, ಪ್ರಾರ್ಥಿಸುವದಕ್ಕಿಂತ ಪ್ರಸಂಗಿಸುವದರಲ್ಲಿ ಹೆಚ್ಚು ಚೆನ್ನಾಗಿರುವುದು ದುಃಖಕರವಾದ ಸಂಗತಿಯಾಗಿದೆ. ಪ್ರಸಂಗದ ಬಲವು ಪ್ರಸಂಗಿಸುವದಕ್ಕಿಂತ ಮೊದಲು ಪ್ರಾರ್ಥಿಸುವದರಿಂದ ನಿರ್ಧರಿಸಲ್ಪಡುತ್ತದೆ.

ಸಭೆಗಳು, ಕೆಲವು ಸಲ ಪ್ರಸಂಗಿಗಳನ್ನು ಹುಡುಕುತ್ತವೆ. "ಸಂದರ್ಶನಗಳಲ್ಲಿ" ನನಗೆ ಎಲ್ಲಾ ರೀತಿಯ ಪ್ರಶ್ನೆಗಳು ಕೇಳಲ್ಪಟ್ಟಿರುತ್ತವೆ. ಇದು ಬುದ್ಧಿವಂತಿಕೆಯದೂ ಒಳ್ಳೆಯದೂ ಆಗಿರುತ್ತದೆ. ಬುದ್ಧಿವಂತಿಕೆಯದಾಗಲೀ ಇಲ್ಲವೇ ಅರ್ಥವಿಲ್ಲದ್ದಾಗಲೀ - ಯಾವುದೇ ಪ್ರಶ್ನೆಗೆ ಯಥಾರ್ಥವಾದ ಉತ್ತರ ಕೊಡಲು ನಾನು ಸಿದ್ಧನಿದ್ದೇನೆ. "ಹೊಡ್ಜ್ ಅವರೇ, ನಿಮ್ಮ ಪ್ರಾರ್ಥನೆಯ ಜೀವಿತ ಹೇಗಿದೆ?" ಎಂಬ ನಿಜವಾದ ಪ್ರಶ್ನೆಯು ನನಗೆ ಎಂದೂ ಕೇಳಲ್ಪಟ್ಟಿರುವದಿಲ್ಲ. ವರವನ್ನು, ವ್ಯಕ್ತಿತ್ವವನ್ನು ಮತ್ತು ಮಾರಾಟ ಕೌಶಲ್ಯವನ್ನು ನಾವು ಬಾಡಿಗೆಗೆ ತೆಗೆದುಕೊಳ್ಳುತ್ತೇವೆ - ಪ್ರಾರ್ಥನೆಯ ಮನುಷ್ಯರನ್ನು ನಾವು ಬಾಡಿಗೆಗೆ ತೆಗೆದುಕೊಳ್ಳುವ ಅವಶ್ಯಕತೆಯಿದೆ. ಯಾವುದೇ ದೊಡ್ಡ ಜಾಗೃತಿಯು ಪ್ರಾರ್ಥನೆ ಮಾತ್ರದಿಂದಲೇ ಬರುತ್ತದೆ. ನೀನು ಪ್ರಾರ್ಥಿಸುವಿಯೋ? ನೀನು ಪ್ರಾರ್ಥಿಸಲು ಯೋಚಿಸಿರುವಿಯೋ? ನೀನು ನಿಜವಾಗಿಯೂ ಪ್ರಾರ್ಥಿಸುವವರೆಗೆ ಪ್ರಾರ್ಥಿಸುವಿಯೋ? ದೇವರು ಪ್ರಾರ್ಥನೆಗೆ ಉತ್ತರವಾಗಿ ಕಾರ್ಯಮಾಡುತ್ತಾನೆ.

ಸಹೋದರರು ನನಗಾಗಿ ಪ್ರಾರ್ಥಿಸುವಾಗ, ಅವರು ನನ್ನನ್ನು ನಂಬುತ್ತಾರೆ ಮತ್ತು ನನ್ನನ್ನು ಪ್ರೀತಿಸುತ್ತಾರೆ. ಸೇವೆಯಲ್ಲಿ ನನ್ನ ಪ್ರಾಧಾನ್ಯತೆಯು ಪ್ರಾರ್ಥನೆಯಾಗಿದೆ. ನಾನು ಅನುದಿನವೂ ಸಭೆಗಾಗಿ - ಸದಸ್ಯರಿಗಾಗಿ, ಸೇವೆಗಳಿಗಾಗಿ, ಸಮಸ್ಯೆಗಳಿಗಾಗಿ, ನೋವುಗಳಿಗಾಗಿ ಪ್ರಾರ್ಥಿಸುತ್ತೇನೆ. ಸದಸ್ಯರ ಕ್ರಮವಾದ ಆಸನಗಳನ್ನು ದಾಟಿ ಹೋಗುತ್ತಿರುವಂತೆ ಶನಿವಾರದಂದು ಪ್ರಾರ್ಥಿಸುತ್ತ ಇಡೀ ಮಂದಿರದೊಳಗೆ ವರ್ಷಗಳಲ್ಲೆಲ್ಲಾ ನಡೆದಾಡುತ್ತೇನೆ. ಪ್ರಾರ್ಥನೆಯು ಪ್ರಸಂಗಿಯ ಸೇವೆಯಲ್ಲಿ ಕೇಂದ್ರವೂ ಪ್ರಾಧಾನ್ಯತೆಯೂ ಆಗಿರತಕ್ಕದ್ದು. ಇಸ್ರಾಯೇಲ್ಯರಿಗಾಗಿ ಮೋಶೆಯು ಪ್ರಾರ್ಥಿಸಿದನು. ಸಭೆಗಳಿಗಾಗಿ ಪೌಲನು ಪ್ರಾರ್ಥಿಸಿದನು. "ನಾನಾದರೋ ನಿಮಗೋಸ್ಕರವಾಗಿ ಯೆಹೋವನನ್ನು ಪ್ರಾರ್ಥಿಸುತ್ತಾ ಆತನ ಉತ್ತಮ ನೀತಿ ಮಾರ್ಗವನ್ನು ನಿಮಗೆ ತೋರಿಸಿಕೊಡುವದನ್ನು ಬಿಡುವದೇ ಇಲ್ಲ; ಬಿಟ್ಟರೆ ಆತನ ದೃಷ್ಟಿಯಲ್ಲಿ ಪಾಪಿಯಾಗಿರುವೆನು" ಎಂದು ಸಮುವೇಲನು ಹೇಳಿದನು (1 ಸಮುವೇಲ 12:23).

ಪ್ರಸಂಗಿಗಳು ಕೆಲವು ಸಲ ಪ್ರವಾದಿಗಳಂತೆ ನಾವು ದೇವರ ವಾಕ್ಯವನ್ನು ಗುಡುಗುತ್ತೇವೆ - ಇರತಕ್ಕದ್ದೆಂದು ಹೆಚ್ಚಾದ ಜನರು ತಿಳಿದಿರುತ್ತಾರೆ. ಕೆಲವು ಸಲ ಪ್ರಸಂಗಿಗಳು ಯಾಜಕರಂತೆ - ಕುರಿಗಳ ಪರವಾಗಿ ದೇವರಿಗೆ ಮೊರೆಯಿಡುತ್ತೇವೆ - ಇರುವುದನ್ನು ಹೆಚ್ಚಾಗಿ ಮರೆಯುತ್ತಾರೆ. ಪ್ರಸಂಗಿಗಳು ಪ್ರವಾದಿಗಳಂತಿರುವ ಮೊದಲು ಯಾಜಕರುಗಳಂತೆ ಇರತಕ್ಕದ್ದು. ನಾವು ಕುರಿಗಳಿಗಾಗಿ ಪ್ರಾರ್ಥಿಸತಕ್ಕದ್ದು - ಹಾಗೆಯೇ ಆಡುಗಳಿಗಾಗಿಯೂ ಪ್ರಾರ್ಥಿಸತಕ್ಕದ್ದು. ದೇವರ ಪ್ರಸಂಗಿಯು ಪರಿಶುದ್ಧನಾಗಿರ

ಬೇಕು. ಇದು ಸಭೆಗೆ ಅವನ ಮೊದಲನೆಯ ಜವಾಬ್ದಾರಿಕೆಯಾಗಿರತಕ್ಕದ್ದು. ಅವನು (ಗುಣದಲ್ಲಿ) ದೇವರ ಮನುಷ್ಯನಾಗಿರತಕ್ಕದ್ದು, ಅವನ ಅತೀ ಪ್ರಾಮುಖ್ಯವಾದ ಕೆಲಸವು ಪ್ರಾರ್ಥನೆಯಾಗಿದೆ. ಆಗ ಸಭೆಯು ದೇವರ ಮನುಷ್ಯನಿಂದ ದೇವರ ಸಂದೇಶವನ್ನು ಕೇಳುವುದು.

◇◇◇◇◇◇◇◇

# ನಿಜವಾದ ಪ್ರಾರ್ಥನೆಯ ಗುಣಗಳು

## ಮತ್ತಾಯ 26:36-44; ಲೂಕ 22:42-44

*"ಆತನು ಮನೋವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋ ಪಾದಿಯಲ್ಲಿತ್ತು" (ಲೂಕ 22:44).*

ದೇವಾಲಯದಲ್ಲಿ ಅಂತಿಮ ಪ್ರಾರ್ಥನೆಯನ್ನು ನಡಿಸುತ್ತಿದ್ದ ಒಬ್ಬ ಸಹೋದರನು, "ನಮ್ಮ ತಲೆಗಳನ್ನು ಬಾಗಿಸೋಣ ಮತ್ತು ಪ್ರಾರ್ಥನೆಯಲ್ಲಿ ನಮ್ಮ ಮನಸ್ಸುಗಳನ್ನು ಮುಚ್ಚಿಕೊಂಡಿರೋಣ" ಎಂದು ಹೇಳಿದನು. ಪ್ರಾರ್ಥನೆಯು ನಮ್ಮ ಜೀವಿತಗಳ ಕೇಂದ್ರಕ್ಕೆ ಹಿಂದಿರುಗಿಸಲ್ಪಡತಕ್ಕದ್ದು. "ಪ್ರಾರ್ಥಿಸಿರಿ ... ಮತ್ತು ನೀವು ಹೆಚ್ಚಾಗಿ ಪ್ರಾರ್ಥಿಸುವಿರಿ." ಪ್ರಾರ್ಥನೆ - ಎಂಥಾ ಅಗಾಧವಾದ ವಿಚಾರ! ಎಂಥಾ ಸದವಕಾಶ! ನಾವು ಯಾಕೆ ಹೆಚ್ಚು ಪ್ರಾರ್ಥಿಸಬಾರದು?

ನಿಜವಾದ ಪ್ರಾರ್ಥನೆಗೆ ಕೆಲವು ಗುಣಗಳಿರುವವು: ಇಲ್ಲದಿದ್ದರೆ, ಪ್ರಾರ್ಥನೆಯು ಒಂದು ಆಚಾರ, ಬಾಲಿಶಭಾವ, ವಿಗ್ರಹಾರಾಧನೆ ಆಗುವುದು. ಪ್ರಾರ್ಥನೆಯು ಏನೂ ಕೊಡದೇ ಏನನ್ನಾದರೂ ಪಡೆದುಕೊಳ್ಳುವ ಅಗ್ಗದ ಮಾರ್ಗವಾಗಿರುವದಿಲ್ಲ. ಪ್ರಾರ್ಥನೆಯು ಸಾರ್ವಭೌಮ ಸರ್ವಶಕ್ತ ದೇವರ ಸನ್ನಿಧಿಯೊಳಗೆ ಪ್ರವೇಶಿಸುವ ಸುಯೋಗ ಹೊಂದಿಕೊಂಡಿರುವುದಾಗಿದೆ. "ದೇವದೂತರು ಕಾಲಿಡಲು ಭಯಪಡುವಲ್ಲಿಗೆ ನಾವು ದುಮುಕ" ತಕ್ಕದ್ದಲ್ಲ. ಪ್ರಾರ್ಥನೆಯ *ನಂತರ* ಏನು ಸಂಭವಿಸುತ್ತದೆ ಎಂಬುದನ್ನು ಪ್ರಮುಖವಾಗಿ ನಾವು ತಿಳಿದಿದ್ದೇವೆ, ಆದಾಗ್ಯೂ ಪ್ರಾರ್ಥನೆಗಿಂತ *ಮೊದಲು* ಏನು ಸಂಭವಿಸತಕ್ಕದ್ದು ಎಂಬುದನ್ನು ಗ್ರಹಿಸಿಕೊಳ್ಳುವದರಲ್ಲಿ ಸೋತು ಹೋಗುತ್ತೇವೆ. ಹೌದು, *ಮೊದಲು ಪ್ರಾರ್ಥಿಸುವ* ಅಗತ್ಯತೆಯಿದೆ ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ! *ಆಮೆನ್!* ನಿಜ ವಾದ ಪ್ರಾರ್ಥನೆಯನ್ನು ಮಾಡುವ ಮೊದಲು ಕೆಲವು ತತ್ವಗಳು ಬರುತ್ತವೆ.

### ನಿಜವಾದ ಪ್ರಾರ್ಥನೆಗಾಗಿ ಪೂರ್ವನಿದರ್ಶನಗಳು

(1) *ದೀನತೆ.* "... ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು" (2 ಪೂರ್ವಕಾಲವೃತ್ತಾಂತ 7:13, 14). ಸ್ವಾರ್ಥದಿಂದ, ದೇವರನ್ನು ಮಾರುವ ಯಂತ್ರಕ್ಕೆ ಕುಗ್ಗಿಸುವದರಿಂದ ಯಾವದು ನಮ್ಮನ್ನು ದೂರವಿಡುತ್ತದೆ? *ದೀನತೆ!*

ಒಬ್ಬನು ಪ್ರಾರ್ಥಿಸುವ ಮೊದಲು, ಅವನು ತನ್ನನ್ನು ತಗ್ಗಿಸಿಕೊಳ್ಳತಕ್ಕದ್ದು. ಅನೇಕ ಸಲ ಪರಿಶುದ್ಧ ಬರಹಕ್ಕೆ ಅನುಗುಣವಾಗಿರದಂಥ ರೀತಿಯಲ್ಲಿ ಪ್ರಾರ್ಥಿಸುತ್ತೇವೆ: "ದೇವರೇ, ನನ್ನನ್ನು ದೀನನನ್ನಾಗಿ ಮಾಡು." ದೇವರು ನಿಯಂತ್ರಣವುಳ್ಳವನಾಗಿದ್ದಾನೆ. ದೇವರು ಶಿಕ್ಷಿಸುತ್ತಾನೆ, ಆದರೆ ಮನುಷ್ಯನು ತನ್ನನ್ನು ತಗ್ಗಿಸಿಕೊಳ್ಳಬಹುದು. ದೇವರು ಬಲವಾದ ಅದ್ಭುತಕಾರ್ಯಗಳನ್ನು ಮಾಡಿದನು, ಆದರೆ ಫರೋಹನು ಎಂದೂ ತನ್ನನ್ನು ತಗ್ಗಿಸಿಕೊಳ್ಳ ಅಲ್ಲ. ಯೂದನು ತನ್ನನ್ನು ತಗ್ಗಿಸಿಕೊಳ್ಳಅಲ್ಲ; ಪೇತ್ರನು ತಗ್ಗಿಸಿಕೊಂಡನು. ಗರ್ವ ಮತ್ತು ಪ್ರಾರ್ಥನೆ ಮಿಶ್ರಗೊಳ್ಳುವದಿಲ್ಲ. ಮನುಷ್ಯನು ಸಹಾಯ ಹೀನನಾಗಿದ್ದಾನೆ. "ಒಬ್ಬ ಮುದುಕನ ಕೇವಲ ಬಲವು ಪ್ರಾರ್ಥನೆಯಾಗಿದೆ" ಎಂದು ಥೋಮಸ್ ಜೆಫರ್ಸನ್ ಹೇಳಿ ದನು. ಯುವಕರು ತಮ್ಮ ಬಲವನ್ನು ನಂಬುವರು, ಮತ್ತು ಐಶ್ವರ್ಯವಂತರು ತಮ್ಮ ಐಶ್ವರ್ಯಗಳನ್ನು ನಂಬುವರು ಸಹಾಯಹೀನರು ದೇವರ ಕಡೆಗೆ ತಿರುಗುವರು!

(2) *ಯೋಚನೆ.* ಪ್ರಾರ್ಥನೆಯು ಬಯಸುವಂಥದ್ದಾಗಲೀ ಇಲ್ಲವೇ ಅನ್ಯಜನರ ಮಂತ್ರವಾಗಲೀ ಆಗಿರುವದಿಲ್ಲ. ಪ್ರಾರ್ಥನೆ ಮಾಡುವ ಮನುಷ್ಯನು ಯೋಚಿಸತಕ್ಕದ್ದು ಹಾಗೂ ಸಿದ್ಧತೆ ಮಾಡತಕ್ಕದ್ದು. "ಎಚ್ಚರವಾಗಿದ್ದು, ಪ್ರಾರ್ಥಿಸಬೇಕು" ಎಂದು ಯೇಸುವು ತನ್ನ ಶಿಷ್ಯರಿಗೆ ಹೇಳಿದನು (ಮತ್ತಾಯ 26:41). ನಾವು ಸ್ವಸ್ಥಚಿತ್ತರಾಗಿರಬೇಕೆಂದು ಪೇತ್ರನು ಹೇಳಿದನು (1 ಪೇತ್ರ 4:7). ಪ್ರಾರ್ಥಿಸುವ ಜನರು ಸ್ಪಷ್ಟವಾದ ಮನಸ್ಸಿನವರೂ ಸ್ವ-ನಿಯಂತ್ರಣದಲ್ಲಿರುವವರೂ ಆಗಿರತಕ್ಕದ್ದು. ಅಧ್ಯಕ್ಷರೊಂದಿಗೆ ನಿಮಗೆ ಸಂದರ್ಶನ ಇದ್ದರೆ, ನೀವು ಸಿದ್ಧರಾಗುವದಿಲ್ಲವೇ? ಪ್ರಾರ್ಥನೆಯು ದೇವರೊಂದಿಗೆ ಒಂದು ಸಭಾಕೂಟವಾಗಿರುತ್ತದೆ. ಪ್ರಾರ್ಥನೆಯು ದೇವರೊಂದಿಗೆ ಮಾತಾಡುವದಕ್ಕಿಂತ ಇನ್ನೂ ಹೆಚ್ಚಿನದಾಗಿದೆ - ಪ್ರಾರ್ಥನೆಯು ದೇವರೊಂದಿಗೆ ಇರುವುದಾಗಿದೆ. ನೀವು ಪ್ರಾರ್ಥನೆ ಮಾಡುವ ಮೊದಲು ಸಿದ್ಧತೆಯ ಕೆಲಸ ಮಾಡಿರಿ.

(3) *ಪರಿಶುದ್ಧ ಬರಹಗಳನ್ನು ಹುಡುಕಿರಿ.* ನಿಮ್ಮ ಬೈಬಲನ್ನು ಓದಿರಿ. ನಾವು ಅಧ್ಯಯನ ಮಾಡುವ ವಾಕ್ಯವು, ನಾವು ಪ್ರಾರ್ಥಿಸುವ ವಾಕ್ಯವಾಗಿದೆ. ನೀವು ದೇವ ರೊಂದಿಗೆ ಮಾತಾಡುವ ಮೊದಲು ದೇವರು ನಿಮ್ಮೊಂದಿಗೆ ಮಾತಾಡುವದಕ್ಕೆ ಬಿಡಿರಿ. ಪ್ರಾರ್ಥನೆಯು ಕೇಳುವುದರಲ್ಲಿ ಪ್ರಾರಂಭವಾಗುತ್ತದೆ. ನಾವು ಪರಿಶುದ್ಧ ಬರಹಕ್ಕಿಂತ ಹೆಚ್ಚಾಗಿ ಪ್ರಾರ್ಥನೆಗೆ ಭಯಭಕ್ತಿ ತೋರಿಸುವುದು ದುಃಖಕರವಾದದ್ದಾಗಿದೆ. "ಧರ್ಮೋಪದೇ ಶಕ್ಕೆ ಕಿವಿಗೊಡದವನು ಮಾಡುವ ದೇವ ಪ್ರಾರ್ಥನೆಯೂ ಅಸಹ್ಯ" (ಜ್ಞಾನೋಕ್ತಿ 28:9). ಪರಿಶುದ್ಧ ಬರಹದ ಅಧ್ಯಯನವನ್ನು ತಿರಸ್ಕರಿಸುವಾಗ, ಪರಿಶುದ್ಧ ಬರಹಕ್ಕನುಗುಣವಾದ ಪ್ರಾರ್ಥನೆಯ ಜೀವಿತವನ್ನು ಅಗಾಧವಾಗಿ ಕೊಚ್ಚಿಕೊಳ್ಳುವುದು ಕಪಟಭಕ್ತಿಯಾಗಿದೆ. "ದೇವರು ಪುಸ್ತಕವನ್ನು" ತಿರಸ್ಕರಿಸುವಾಗ, "ಪುಸ್ತಕದ ದೇವರಿಂದ" ನಾವು ಕೇಳಿಕೊಳ್ಳಲಾರೆವು.

(4) *ಮಾನಸಾಂತರ.* ಪಾಪಿಗಳು ಮಾನಸಾಂತರ ಪಡತಕ್ಕದ್ದು ಹಾಗೂ ಕೇಳ ಲ್ಪಡುವದಕ್ಕಾಗಿ ದೇವರ ಕಡೆಗೆ ಹಿಂದಿರುಗತಕ್ಕದ್ದು. "ಯಾಕಂದರೆ ಕರ್ತನು ನೀತಿ ವಂತರನ್ನು ಕಟಾಕ್ಷಿಸುತ್ತಾನೆ, ಆತನು ಅವರ ವಿಜ್ಞಾಪನೆಗಳಿಗೆ ಕಿವಿಗೊಡುತ್ತಾನೆ. ಕೆಡುಕರಿಗೋ ಕರ್ತನು ಕೋಪದ ಮುಖವುಳ್ಳವನಾಗಿರುತ್ತಾನೆ" (1 ಪೇತ್ರ 3:12). 1 ಯೋಹಾನ 3:22ನ್ನು ಸಹ ಓದಿರಿ: "ಮತ್ತು ನಾವು ಆತನ ಆಜ್ಞೆಗಳನ್ನು ಕೈಕೊಂಡು ಆತನ ಎಣಿಕೆಯಲ್ಲಿ ಮೆಚ್ಚಿಕೆಯಾದ ಕಾರ್ಯಗಳನ್ನು ಮಾಡುವವರಾಗಿರುವದರಿಂದ ಏನು ಬೇಡಿಕೊಂಡರೂ ಆತನಿಂದ ಹೊಂದುವೆವು." "ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟಿದ್ದರೆ ಸ್ವಾಮಿಯು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ" ಎಂದು ಕೀರ್ತನೇ 66:18 ಹೇಳುತ್ತದೆ. ನಮ್ಮ ಪಾಪಗಳನ್ನು ಅರಿಕೆ ಮಾಡಿ, ಆ ಮೇಲೆ ಪ್ರಾರ್ಥಿಸ ಬೇಕು

ಎಂದು ಯಾಕೋಬನು ಆಜ್ಞಾಪಿಸಿದನು (ಯಾಕೋಬ 5:16). ನಮ್ಮ ಪಾಪಭರಿತ ಭ್ರಾಂತಿಗಳಿಗೆ ದೇವರು ಒತ್ತೆಯಾಳಾಗಿರುವದಿಲ್ಲ, ದೇವರು ಪ್ರಾರ್ಥನೆಗೆ ಸೆರೆಯಾಳಾಗಿರುವದಿಲ್ಲ.

(5) *ಶಿಸ್ತು ಪಾಲನೆ.* ಕೊರ್ನೇಲ್ಯನ ವಿಷಯದಲ್ಲಿ ಪ್ರಾರ್ಥನೆಗಿಂತ ಮೊದಲು ಕೊಡುವಿಕೆಯು ಯಾದಿ ಮಾಡಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 10:2). ಪ್ರಾರ್ಥನೆಗೆ ಮೊದಲು ಉಪವಾಸಮಾಡುವುದು ಬರುತ್ತದೆ (ಲೂಕ 2:37; 1 ಕೊರಿಂಥ 7:5). ನಮ್ಮ ಅತ್ಯುತ್ತಮವಾದದ್ದನ್ನು ಕೊಡುವದಕ್ಕಿಂತ ಮೊದಲು, ದೇವರು ತನ್ನ ಅತ್ಯುತ್ತಮವಾದದ್ದನ್ನು ನಮಗೆ ಕೊಡುವದಿಲ್ಲ. ನೀನು ಒಪ್ಪಿಕೊಳ್ಳದೇ ಇದ್ದುದ್ದಕ್ಕಾಗಿ ನೀನು ಪ್ರಾರ್ಥನೆ ಮಾಡಬೇಡ. ಪ್ರಾರ್ಥನೆಯ*ನಂತರ* ನಿನಗೆ ಯಾವುದು ಇರಬೇಕೆಂದು ಬಯಸುತ್ತೀಯೋ ಅದಕ್ಕಾಗಿ ಪ್ರಾರ್ಥನೆಯ *ಮೊದಲು* ನೀನು ಸಿದ್ಧನಾಗಿರತಕ್ಕದ್ದು. “ಪ್ರಾರ್ಥಿಸು ... ಮತ್ತು ನೀನು ಹೆಚ್ಚು ಪ್ರಾರ್ಥಿಸುವು!”

## ನಿಜವಾದ ಪ್ರಾರ್ಥನೆಯ ಗುಣಮಟ್ಟಗಳು

ಈಗ ನಾವು ನಮ್ಮ ಪಠ್ಯಕ್ಕೆ ಹಿಂದಿರುಗೋಣ. ಕೇಂದ್ರೀಕರಿಸುವಿಕೆಯು ಯೇಸು ಆಗಿರುವನು. ಆತನ ಪ್ರಾರ್ಥನಾ ಜೀವಿತವು ಪರಿಪೂರ್ಣ ಮಾದರಿಯಾಗಿದೆ. ಯೇಸುವಿಗೆ ಪ್ರಾರ್ಥನೆಯ ಅಗತ್ಯತೆಯಿದ್ದರೆ, ನಮಗೆ ಇನ್ನೂ ಹೆಚ್ಚು ಅಗತ್ಯತೆಯುಳ್ಳದ್ದಾಗಿರುವದಿಲ್ಲವೇ? ನಾವು ಯೇಸುವಿನಿಂದ ಏನನ್ನು ಕಲಿಯತಕ್ಕದ್ದು?

(1) *ಯಥಾರ್ಥತೆ.* ನಮ್ಮ ಅತ್ಯುತ್ತಮವಾದ ಪ್ರಾರ್ಥನೆಗಳು ತಪ್ಪಾದವುಗಳಾಗಿರುತ್ತವೆ - ನಮ್ಮ ಮಾನವ ಕುರುಡುತನದಿಂದ ನಮ್ಮೆಲ್ಲರಿಗೂ ಅಗೋಚರವಾದ ಪ್ರಬೋಧನೆಗಳು ಬರುವವು. ಯೇಸುವಿನ ಆಳ, ಯಥಾರ್ಥತೆಯ ಬಗ್ಗೆ ಯಾರೂ ಸಂಶಯಪಡಲಾರರು. ಪ್ರಾರ್ಥಿಸಲು ಯೇಸುವು ಗೆತ್ಸೇಮನೆಗೆ ಹೋದನು - ಆತನನ್ನು ಎಲ್ಲಿ ಕಂಡುಕೊಳ್ಳಬಹುದು ಎಂಬುದನ್ನು ಯೂದನು ತಿಳಿದಿದ್ದನು. ಯೇಸುವು ದೇವರ ಸಾನ್ನಿಧ್ಯವನ್ನು ರೂಢಿಸಿದನು. ಯೇಸುವು ಪ್ರಾರ್ಥಿಸಿದಾಗ, ಬೆವರು ರಕ್ತದಂತೆ ಹನಿಯಾಗಿ ಬೀಳುತ್ತಿತ್ತು. ಯೆರೆಮೀಯನು ನಮ್ಮ ಪೂರ್ಣ ಹೃದಯದಿಂದ ಹುಡುಕಬೇಕೆಂದು ಹೇಳಿದನು (ಯೆರೆಮೀಯ 29:13). ಕಪಟತನ, ಅಪ್ರಾಮಾಣಿಕತೆ ಮತ್ತು “ಬಲಿಯಾಗುವಿಕೆಗಳು” ಯಾವಾಗಲೂ ನಮ್ಮನ್ನು ಸೋಲಿಸುತ್ತವೆ. ಪ್ರಾಮಾಣಿಕರಾಗಿರಲು ಯಾವಾಗಲೂ ಎಲ್ಲಾ ಸಂಬಂಧಗಳ ಅಸ್ತಿವಾರವಾಗಿದೆ. ಪ್ರಾಮಾಣಿಕರಾಗಿರಲು ನಾವು ನಿರಾಕರಿಸುವಾಗ ಪ್ರಾರ್ಥನೆಯು ಸೋತುಹೋಗುತ್ತದೆ.

(2) *ಉತ್ಸುಕತೆ.* “ಆತನು ಮನೋವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು” (ಲೂಕ 22:44). ಯೇಸುವು ಎರಡನೆಯ ಸಲ, ಮೂರನೆಯ ಸಲ ಸಹ ... ಆಸಕ್ತಿಯಿಂದ ಪ್ರಾರ್ಥಿಸಿದನು! ನಮ್ಮ ಪ್ರಾರ್ಥನೆಗಳಲ್ಲಿ ಬಲವಾಗಿ ಒಂದಾಗಿರಬೇಕೆಂದು ಪೌಲನು ನಮಗೆ ಹೇಳಿದನು (ರೋಮಾಪುರ 15:30). ಪ್ರಾರ್ಥನೆಯು ಕೆಲಸವಾಗಿದೆ - ಕಠಿಣವಾದ ಕೆಲಸವಾಗಿದೆ. “ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ” (ಯಾಕೋಬ 5:16ಸಿ). ಯಾಕೋಬ 5:16ರಲ್ಲಿಯ “ನೀತಿವಂತನ” ಎಂಬುದು ಬಹುವಚನದಲ್ಲಿ ಅಲ್ಲ, ಏಕವಚನದಲ್ಲಿರುವದನ್ನು ಗಮನಿಸಿರಿ.

(3) *ಒಪ್ಪಿಸಿಕೊಡು.* ಯೇಸುವು ಮರಣದ ಮಟ್ಟಿಗಿನ ವೇದನೆಯಲ್ಲಿ ಇದ್ದನು. ಯೇಸುವು “ಬೋರಲ ಬಿದ್ದನು” ಎಂದು ಮತ್ತಾಯನು ಹೇಳುತ್ತಾನೆ (ಮತ್ತಾಯ

26:39). ''ಆತನು ಮೊಣಕಾಲೂರಿದನು'' ಎಂದು ಲೂಕನು ಹೇಳಿದನು (ಲೂಕ 22:41). ಕ್ರಿಸ್ತನು ತನ್ನನ್ನು ತಗ್ಗಿಸಿಕೊಂಡನು, ಪ್ರಾರ್ಥನೆಯಲ್ಲಿ ತನ್ನನ್ನು ಸಮರ್ಪಿಸಿಕೊಂಡನು. ಆಸನವು ಪ್ರಾರ್ಥನೆಯಾಗಿರುವದಿಲ್ಲ. ಆದರೆ ಪ್ರಾರ್ಥನೆಯು ಆಸನವನ್ನು ಒಳಗೊಂಡಿರುತ್ತದೆ! ದೀನತೆಗಾಗಿ ನಾವು ಪ್ರಾರ್ಥಿಸುವದಿಲ್ಲ; ನಾವು ನಮ್ಮನ್ನೇ ತಗ್ಗಿಸಿಕೊಳ್ಳುತ್ತೇವೆ. ಸ್ವಾರ್ಥವನ್ನು ಬರಿದು ಮಾಡಿಕೊಳ್ಳುವುದು, ಸ್ವಾರ್ಥವನ್ನು ತ್ಯಜಿಸಿಬಿಡುವುದು, ತ್ಯಜಿಸಿಬಿಡುವ ಪ್ರಾರ್ಥನೆ ಇರುವುದು. ಲೂಕ 18:9-14ರಲ್ಲಿಯ ಸಾಮ್ಯದಲ್ಲಿ, ಸುಂಕದವನು ತನ್ನ ಎದೆಯನ್ನು ಬಡಿದುಕೊಳ್ಳುತ್ತ, ''ದೇವರೇ, ಪಾಪಿಯಾದ ನನ್ನನ್ನು ಕರುಣಿಸು!'' ಎಂದು ಹೇಳಿದನು. ಹೆಚ್ಚಿಸಲ್ಪಡುವವನು ತಗ್ಗಿಸಲ್ಪಡುವನು ಮತ್ತು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು. ಒಬ್ಬ ದೊಡ್ಡ ಪಿಯಾನಿಸ್ಟನು ಬಿಥೂವೀನನಗೆ ಒಳಪಟ್ಟಿದ್ದ ಪಿಯಾನೋ ಬಾರಿಸಲು ಆಮಂತ್ರಿಸಲ್ಪಟ್ಟನು. ''ನಾನು ಯೋಗ್ಯನಾಗಿರುವುದಿಲ್ಲ'' ಎಂದು ಅವನು ತಿರಸ್ಕರಿಸಿದನು. ಎಲ್ಲಾ ನಿಜವಾದ ದೊಡ್ಡ ಜನರು ದೀನರಾಗಿರುತ್ತಾರೆ. ಮಾರ್ಪಡುವಂಥದ್ದು ಸಮರ್ಪಿಸಿಕೊಳ್ಳುವಂಥದ್ದಾಗಿರುತ್ತದೆ.

(4) *ಎಡೆಬಿಡದೆ ಯತ್ನಿಸುವುದು (ಆಗ್ರಹ).* ಯೇಸುವು ಅದೇ ಪ್ರಾರ್ಥನೆಯನ್ನು ಮೂರು ಸಲ ಪ್ರಾರ್ಥಿಸಿದನು, ಆದಾಗ್ಯೂ ಆತನು ತನ್ನ ನಂಬಿಕೆಯನ್ನು ಎಂದೂ ಕಳೆದು ಕೊಳ್ಳಲಿಲ್ಲ. ಆತನ ತನ್ನ ಶಿಷ್ಯರು ಮೂರು ಸಲ ಮಲಗಿರುವದನ್ನು ಕಂಡುಕೊಂಡನು; ಆದಾಗ್ಯೂ ಆತನು ಅವರನ್ನು ಕ್ಷಮಿಸುವದನ್ನು ಎಂದೂ ನಿಲ್ಲಿಸಲಿಲ್ಲ. ಯೇಸುವು ಅನ್ಯಾಯಗಾರನಾದ ನ್ಯಾಯಾಧೀಶನ ಸಾಮ್ಯವನ್ನು ಹೇಳಿದನು (ಲೂಕ 18:1-8). ವಿಧೇಯತೆಯು ''ಅವನನ್ನು ಪೀಡಿಸಿದ್ದರಿಂದ'' (ವಚನ 5). ಆವನು ಆಕೆಯು ಬಯಸಿದ್ದನ್ನು ಕೊಟ್ಟನು. ಈ ನ್ಯಾಯಾಧೀಶನು ದೇವರಿಗೆ ಭಯಪಡಲಿಲ್ಲ ಇಲ್ಲವೇ ಮನುಷ್ಯನನ್ನು ಗೌರವಿಸಲಿಲ್ಲ. ಯೇಸುವು ನಮಗೆ ಪ್ರಾರ್ಥಿಸಬೇಕು, ಓಡಿ ಹೋಗಬಾರದು ಎಂದು ಹೇಳಿದನು. ಈ ಸಾಮ್ಯವು ದೇವರ ಒಂದು ಪರೀಕ್ಷೆಯಾಗಿರುವದಿಲ್ಲ, ಆದರೆ ನಮ್ಮ ಪರೀಕ್ಷೆಯಾಗಿದೆ. ಯೇಸುವು ಬಲವಾಗಿ ಹೋರಾಡಿದಂತೆ ಪ್ರಾರ್ಥಿಸಲು ಸಿದ್ಧ ನಾಗಿದ್ದನು, ಆದರೆ ದೇವರು ''ಬೇಡ'' ಎಂದು ಯೇಸುವಿಗೆ ಹೇಳಿದನು! ಮನುಷ್ಯನನ್ನು ರಕ್ಷಿಸುವ ತೀರ್ಮಾನವು ಗೊಲ್ಗೊಥಾದಲ್ಲಿ ಮಾಡಲ್ಪಡಲಿಲ್ಲ ಆದರೆ ಗೆತ್ಸೇಮನೆಯಲ್ಲಿ ಮಾಡಲ್ಪಟ್ಟಿತು! ಅಲ್ಲಿ ದೇವರು ''ಇಲ್ಲ'' ಎಂದು ಹೇಳಿದನು - ಅಲ್ಲಿ ಕ್ರಿಸ್ತನು ''ಹೌದು'' ಎಂದು ಹೇಳಿದನು.

(5) *ಎಚ್ಚರದಿಂದಿರುವುದು.* ಮನಸ್ಸು ಸಿದ್ಧವಾಗಿದೆ, ಆದರೆ ದೇಹವು ಬಲಹೀನ ವಾಗಿದೆ. ಯೇಸುವು ತಾನು ಪ್ರಾರ್ಥಿಸಿದಾಗ ತನ್ನ ಶಿಷ್ಯರು ಎಚ್ಚರದಿಂದ ಇರಬೇಕೆಂದು ಹೇಳಿದನು. ಅವರು ನಿದ್ರಿಸಿದರು, ನಾವು ನಿದ್ರಿಸುತ್ತೇವೆ. ಪ್ರಾರ್ಥನೆಯು ಸಹನೆಯನ್ನು, ಎಚ್ಚರಿಕೆಯನ್ನು ಮತ್ತು ಅವಸರವನ್ನು ಕೇಳುತ್ತದೆ. ಪ್ರಾರ್ಥನೆಯು ಹೋರಾಟವನ್ನು ಒಳಗೊಂಡಿರುತ್ತದೆ. ನಾವು ಕೃಪೆಯಿಂದ ರಕ್ಷಿಸಲ್ಪಟ್ಟಿರುತ್ತೇವೆ. ಪ್ರತಿದಿನ, ಯೇಸುವಿನ ಬಲದಲ್ಲಿ, ಪಾಪದ ಮತ್ತು ಶುದ್ಧೀಕರಣದ ಮಧ್ಯದಲ್ಲಿ ನಿತ್ಯವಾದ ಹೋರಾಟವಿರುತ್ತದೆ. ಪ್ರಾರ್ಥನೆಯಲ್ಲಿ ಹೋರಾಟವು ಗೆಲ್ಲುತ್ತದೆ ಇಲ್ಲವೇ ಸೋಲುತ್ತದೆ. ಕಾದುಕೊಂಡಿರುವಿಕೆಯು ನಮ್ಮ ಪ್ರಾರ್ಥಿಸುವದರಲ್ಲಿ ಇಡುತ್ತದೆ, ಮತ್ತು ಪ್ರಾರ್ಥನೆಯಿಂದ ತುಂಬಿರುವದು ನಮ್ಮನ್ನು ಕಾದುಕೊಂಡಿರುವಂತೆ ಮಾಡುತ್ತದೆ. ಪ್ರಾರ್ಥಿಸದೇ ಕಾದುಕೊಂಡಿರುವುದು ಊಹೆಯಾಗಿದೆ; ಕಾದುಕೊಂಡಿರದೇ ಪ್ರಾರ್ಥಿಸುವುದು ಕಪಟತನವಾಗಿದೆ. ''... ನೀವು ಜಿತೇಂದ್ರಿಯರಾಗಿಯೂ ಪ್ರಾರ್ಥನೆಗೆ ಸಿದ್ಧವಾಗಿರುವಂತೆ ಸ್ವಸ್ಥ ಚಿತ್ತರಾಗಿಯೂ ಇರ್ರಿ'' (1 ಪೇತ್ರ 4:7). ''ಒಂದು ಪ್ರಾರ್ಥನೆಯು ಎಷ್ಟು ದೊಡ್ಡದಾಗಿರುತ್ತದೆಂಬುದನ್ನು

ಸೈತಾನನು ತಿಳಿದಿರುತ್ತಾನೆ" ಎಂದು ಜಾನ್ ಕ್ರಿಸೊಸ್ಟಮ್ ಒಪ್ಪಿಕೊಂಡಿದ್ದಾರೆ.

(6) *ನಂಬಿಕೆ.* ಯೇಸುವಿನ ನಿರ್ದಿಷ್ಟವಾದ ಬಿನ್ನಹಕ್ಕೆ ದೇವರು "ಇಲ್ಲ" ಎಂದು ಹೇಳಿದನು, ಆದರೆ ಒಬ್ಬ ದೇವದೂತನು ಸೇವೆ ಮಾಡಲು ಆತನ ಬಳಿಗೆ ಕಳುಹಿಸಲ್ಪಟ್ಟನು. ಪ್ರಾರ್ಥನೆಯ ನಂಬಿಕೆಯ ಮಾತಾಡುವಿಕೆಯಾಗಿದೆ.

> ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ (ಮಾರ್ಕ 11:24).

> ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ ಅಂದನು (ಮತ್ತಾಯ 21:22).

> ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು (ಯಾಕೋಬ 1:6).

> ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ರಕ್ಷಿಸುವದು (ಯಾಕೋಬ 5:15ಎ).

ನಂಬಿಕೆಯು ದೇವರು *ಮಾಡಬಲ್ಲನು* ಎಂದಷ್ಟೇ ಅಲ್ಲ, ಆದರೆ ದೇವರು *ಮಾಡುತ್ತಾನೆ* ಎಂದೂ ನಂಬುತ್ತದೆ. ಆದುದರಿಂದ ನಂಬಿಕೆಯು ಭೂಮಿಯ ಮೇಲೆ ಅತೀ ಹೆಚ್ಚು ವ್ಯಾವಹಾರಿಕ ಸಂಗತಿಯಾಗಿದೆ. ಶಿಷ್ಯರು ನಂಬಿದರು - ಆಗ ಅವರು ದೃಢಪಡಿಸಲ್ಪಟ್ಟರು! ನಾವು ನಂಬುವುದಕ್ಕಿಂತ ಮೊದಲು ದೃಢಪಡಿಸಲ್ಪಡಲು ಬಯಸುತ್ತೇವೆ!

ಇದನ್ನು ನನಗೆ ವಿವರಿಸಿರಿ: ಹೆಚ್ಚಾದ ಅಮೇರಿಕನ್‌ರು ಪ್ರಾರ್ಥಿಸುತ್ತಾರೆ, ಆದಾಗೂ ಕೆಲವರು ದೇವಾಲಯಕ್ಕೆ ಹೋಗುತ್ತಾರೆ, ಮತ್ತು ಸ್ವಲ್ಪ ಜನರು ಬೈಬಲನ್ನು ಗಂಭೀರತೆಯಿಂದ ಓದುತ್ತಾರೆ. ಅಮೇರಿಕನ್ನರು ತಾವು ನಂಬದೇ ಇರುವ ಮತ್ತು ಆತನಿಗೆ ಆಲಿಸಲು ನಿರಾಕರಿಸುವವರು ಯಾಕೆ ದೇವರಿಗೆ ಪ್ರಾರ್ಥಿಸುತ್ತಾರೆ? ಅದಕ್ಕೆ ಉತ್ತರಕೊಡಿರಿ! ಪ್ರಾರ್ಥನೆಯು ವಿಶ್ವದ ಕೊನೆಯ ಆಶ್ರಯವಾಗಿದೆ ... ಒಬ್ಬನಿಗೆ ಕಳೆದು ಕೊಳ್ಳುವುದು ಯಾವುದೂ ಇರುವದಿಲ್ಲ. ಈ ರೀತಿಯ ಪ್ರಾರ್ಥನೆಯು ದೇವರನ್ನು ಹೊಂದಿಕೊಂಡಿರದೇ ಧಾರ್ಮಿಕರಾಗಿರುವಂತೆ ಮಾಡುತ್ತದೆ. ಇದಲ್ಲದೆ, ಇದರ ಬಗ್ಗೆ ಯೋಚಿಸಿರಿ: ಪ್ರಾರ್ಥನೆಯ ಬಗ್ಗೆ ಪುಸ್ತಕವನ್ನು ಬರೆದ ಒಬ್ಬ ದೈವಜ್ಞಾನ ಶಾಸ್ತ್ರಿಯು ಪ್ರಾಮಾಣಿಕತೆಯಿಂದ ಅರಿಕೆಮಾಡಿದನು, "ಆಂತರ್ಯದಲ್ಲಿ ನಾನು ಪ್ರಾರ್ಥನೆಯಲ್ಲಿ ನಂಬಿಕೆಯಿಟ್ಟಿರಲಿಲ್ಲ" ನೀನು ನಂಬಿರುವಿಯೋ? ಆಳವಾಗಿ? ಈ ದೈವಜ್ಞಾನ ಶಾಸ್ತ್ರಿಯು "ಪ್ರಾರ್ಥಿಸಲು ಪ್ರಾರಂಭಿಸುವೆನೆಂದು" ಆ ದಿನ ಪ್ರಮಾಣ ಮಾಡಿದನು. ಪೃಥಕ್ಕರಣ ಮಾಡಬೇಡಿರಿ, ತತ್ವಜ್ಞಾನ ಮಾಡಬೇಡಿರಿ, ಊಹೆಮಾಡಬೇಡಿರಿ ... ಪ್ರಾರ್ಥಿಸಿರಿ! ಪ್ರಾರ್ಥಿಸುವದರಿಂದ ಪ್ರಾರ್ಥಿಸುವದನ್ನು ಕಲಿತುಕೊಳ್ಳಿರಿ.

ಪದೇ ಪದೇ ಕೇಳಲ್ಪಡುವ ಚರ್ವಿತ ಚರ್ವಣವು, "ಯಾವುದೂ ಕೆಲಸ ಮಾಡುವದಿಲ್ಲ ... ನಾನು ಪ್ರಾರ್ಥನೆಯನ್ನೂ ಪ್ರಯತ್ನಿಸಿದೆನು ಮತ್ತು ಅದು ಕಲಸಮಾಡಲಿಲ್ಲ." ಇದು ಷರತ್ತಿನ ಪತ್ರವಾಗಿದೆ, ಪ್ರಾರ್ಥನೆಯಾಗಿರುವದಿಲ್ಲ. "ನಿನ್ನ ಚಿತ್ತವು ನೆರವೇರಲಿ" ಎಂಬುದು ಪರಿಶುದ್ಧ ಬರಹಕ್ಕನುಗುಣವಾಗಿದೆ, ಆದಾಗ್ಯೂ ಅದು ಒಂದು ಕೊಪ್-ಓಟ್ ಆಗಬಹುದು.

ಆದಾಗುವುದೆಂದು ನಾವು ನಂಬದಿದ್ದರೆ, ನಾವು ದೇವರಿಗೆ (ಮತ್ತು ಪ್ರಾರ್ಥನೆಗೆ) ಹೊರಗೆ ಮಾರ್ಗತೋರಿಸುವೆವು. ಈ ಅಪನಂಬಿಕೆಯು, "ನೀನು ಮಾಡುವಿಯೆಂದು ನಾನು ನಂಬುವದಿಲ್ಲ" ಎಂದು ಮೌನವಾಗಿ ಹೇಳುತ್ತ ದೇವರ ಸಾರ್ವಭೌಮತ್ವದ ಬಗ್ಗೆ ಸಂಶಯಪಡುತ್ತದೆ.

(7) "*ನಿನ್ನ ಚಿತ್ತವು ನೆರವೇರಲಿ.*" ಯೇಸುವು ಪ್ರಾರ್ಥಿಸಿದನು. "... ಆದಾಗ್ಯೂ ನನ್ನ ಚಿತ್ತವಲ್ಲ, ಆದರೆ ನಿನ್ನ ಚಿತ್ತವೇ ನೆರವೇರಲಿ" (ಲೂಕ 22:42). ಮಾದರಿಯ ಪ್ರಾರ್ಥನೆಯಲ್ಲಿ ಯೇಸುವು, "ನನ್ನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ" ಎಂದು ಹೇಳಿದನು (ಮತ್ತಾಯ 6:10). 1 ಯೋಹಾನ 5:14, 15 ಹೀಗಿದೆ: "ಮತ್ತು ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯ ವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬುದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ." ಮನುಷ್ಯನು ಹೇಗೆ ಪ್ರಾರ್ಥಿಸಬೇಕೆಂಬುದನ್ನು ನಮಗೆ ರೋಮಾಪುರ 8:26 ಹೀಗೆ ಹೇಳುತ್ತದೆ: "ಹಾಗೆ ಪರಿಶುದ್ಧಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪರಿಶುದ್ಧಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳು ತ್ತಾನೆ." ಆ ಚಿತ್ತವು ಏನಾಗಿರತಕ್ಕದ್ದೆಂದು ಆತನಿಗೆ ಹೇಳುವದಕ್ಕೆ ಮಾತ್ರವೇ ದೇವರಿಗೆ ಪ್ರಾರ್ಥಿಸುವುದು ಅರ್ಥವಿಲ್ಲದ್ದಾಗಿರುತ್ತದೆ. ಮನುಷ್ಯನೂ ಸಹ ಅದನ್ನು ಅನುದಿನವೂ ಅರ್ಥಮಾಡಿ ಕೊಳ್ಳುವದಿಲ್ಲ. ಹಾಗಿದ್ದರೆ ನಿತ್ಯವಾದದ್ದನ್ನು ಅದಕ್ಕೆ ಬಿಟ್ಟುಕೊಡಿರಿ. "ನಿನ್ನ ಚಿತ್ತವು ನೆರವೇರಲಿ" ಎಂದು ಪ್ರಾರ್ಥಿಸುವುದು ಸಂಪೂರ್ಣ ಸಹಾಯ ಹೀನತೆಯಾಗಿರುತ್ತದೆ. ಮನುಷ್ಯನು ದೇವರಿಗೆ ಸಮರ್ಪಿಸಿಕೊಳ್ಳುತ್ತಾನೆ, ದೇವರಿಗೆ ಒಪ್ಪಿಸಿಕೊಡುತ್ತಾನೆ. ಹೌದು, ಜಗತ್ತು ಬದಲಾಗುತ್ತಿದೆ. ಯಾರಾದರೂ ಸಭೆಯನ್ನು ಬದಲಾಯಿಸಬಲ್ಲರು. ಒಂದು ಮೂಲ ಜ್ಞಾಪಿಕೆಯು ಇರುವುದು: "ಬದಲಾವಣೆಯ ಜಗತ್ತಿನಲ್ಲಿ, ಸರಳ ಸಂಗತಿಯು ಬದಲಾಗದ ಸಂಗತಿಗಳನ್ನು ತಿಳಿಯುವುದು ಮತ್ತು ಕಾಪಾಡಿಕೊಳ್ಳುವುದು" ಆಗಿರುತ್ತದೆ. ಯಾವುದು ಬದಲಾಗುವದಿಲ್ಲ ಎಂಬುದನ್ನು ನೀವು ತಿಳಿದುಕೊಳ್ಳದಿದ್ದರೆ, ನೀವು ತಪ್ಪಾದ ಸಂಗತಿಗಳನ್ನು ಬದಲಾಯಿಸುವಿರಿ. ಪ್ರಾರ್ಥಿಸುವುದು ಮತ್ತು ದೇವರ ಚಿತ್ತದಲ್ಲಿ ಪ್ರಾರ್ಥಿಸದೇ ಇರುವುದು ಯಾವುದೇ ಅರ್ಥಕೊಡುವದಿಲ್ಲ. ನಿಮ್ಮ ಆಳವಾದ ವಿಚಾರಕ್ಕಾಗಿ ಇದನ್ನು ಯೋಚಿಸಿರಿ: ನಮ್ಮ ಸಭಾಕೂಟಗಳಲ್ಲಿ ರೋಗಿಗಳಿಗಾಗಿ ಪ್ರಾರ್ಥಿಸುವೆವು. ದೇವರು ವೈದ್ಯರನ್ನೂ ಔಷಧಿಗಳನ್ನೂ ಉಪಯೋಗಿಸುವನೆಂದು ಪ್ರಾರ್ಥಿಸುವೆವು. ಅದನ್ನು ನಿಲ್ಲಿಸಬೇಡಿರಿ, ಆದರೆ ಇನ್ನೂ ಮುಂದೆ ಪ್ರಾರ್ಥಿಸಿರಿ - ದೇವರು ಗುಣಪಡಿಸುವನೆಂದು ದೇವರಿಗೆ ಪ್ರಾರ್ಥಿಸಿರಿ! ವೈದ್ಯರು ಚಿಕಿತ್ಸೆ ಮಾತ್ರ ಮಾಡಬಲ್ಲರು! ದೇವರು ಗುಣಪಡಿಸುತ್ತಾನೆ. ದೇವರು ವೈದ್ಯರಿಲ್ಲದೇ ಹಾಗೂ ವೈದ್ಯರನ್ನು ಹೊರತುಪಡಿಸಿ ಗುಣಪಡಿಸಬಲ್ಲನು! ದೇವರ ಚಿತ್ತವು ಮಾಡಲ್ಪಡಲಿಕ್ಕಾಗುವಂತೆ ಪ್ರಾರ್ಥಿಸಿರಿ!

ದಿನವು ಮುಗಿದಾಗ ಪ್ರಾರ್ಥಿಸಲು ನಾನು ಮೊಣಕಾಲೂರಿದೆ,
ಮತ್ತು ಪ್ರಾರ್ಥಿಸಿದೆನು, "ಕರ್ತನೇ ಪ್ರತಿಯೊಬ್ಬರನ್ನೂ ಆಶೀರ್ವದಿಸು.
ದುಃಖಪಡುತ್ತಿರುವ ಪ್ರತಿಯೊಂದು ಹೃದಯದಿಂದ ನೋವನ್ನು ತೆಗೆದು ಹಾಕು,
ಮತ್ತು ರೋಗಿಗಳು ಪುನಃ ಆರೋಗ್ಯವಂತರಾಗಲಿ."

ಮತ್ತು ಆಗ ಇನ್ನೊಂದು ದಿನ ಎಚ್ಚತ್ತುಕೊಂಡೆನು,
    ಮತ್ತು ಜಾಗರೂಕತೆಯಿಲ್ಲದೆ ನಿನ್ನ ಮಾರ್ಗದಲ್ಲಿ ಹೋದೆನು.
ಇಡೀ ದಿನ ನಾನು ಪ್ರಯತ್ನಿಸಲಿಲ್ಲ
    ಯಾವುದೇ ಕಣ್ಣಿನಿಂದ ಕಣ್ಣೀರನ್ನು ಒರೆಸಲು.

ಬೀದಿಯಲ್ಲಿ ಯಾವುದೇ ಸಹೋದರರನ
    ಭಾರವನ್ನು ಹಂಚಿಕೊಳ್ಳಲು ನಾನು ಪ್ರಯತ್ನಿಸಲಿಲ್ಲ.
ನಾನು ನೋಡಲಿಕ್ಕೂ ಸಹ ಹೋಗಲಿಲ್ಲ
    ನನ್ನ ಪಕ್ಕದ ಮನೆಯಲ್ಲಿದ್ದ ರೋಗಿಯನ್ನು.

ಹೀಗಿದ್ದರೂ ಮತ್ತೊಮ್ಮೆ ದಿನವು ಮುಗಿದಾಗ,
    ನಾನು ಪ್ರಾರ್ಥಿಸಿದೆನು, "ಕರ್ತನೇ, ಪ್ರತಿಯೊಬ್ಬರನ್ನು ಆಶೀರ್ವದಿಸು"
    ಎಂದು.
ಆದರೆ ನಾನು ಪ್ರಾರ್ಥಿಸಿದಂತೆ, ನನ್ನ ಕಿವಿಯಬಳಿಗೆ
    ಸ್ಪಷ್ಟವಾಗಿ ಪಿಸುಗುಟ್ಟಿದ ಧ್ವನಿಯೊಂದು ಬಂದಿತು.

"ನಿಲ್ಲು, ಕಪಟಿಯೇ, ನೀನು ಪ್ರಾರ್ಥಿಸುವ ಮೊದಲು,
    ಇಂದು ಯಾರನ್ನು ಆಶೀರ್ವದಿಸಲು ನೀನು ಪ್ರಯತ್ನಿಸಿರುವಿ?
ದೇವರ ಮಧುರವಾದ ಆಶೀರ್ವಾದಗಳು ಯಾವಾಗಲೂ ಹೋಗುವವು,
    ಇಲ್ಲಿ ಆತನನ್ನು ಸೇವೆ ಮಾಡುವ ಹಸ್ತಗಳಿಂದ."

ಮತ್ತು ಆಗ ನನ್ನ ಮುಖವನ್ನು ಮುಚ್ಚಿಕೊಂಡೆನು ಮತ್ತು ಅತ್ತೆನು,
    "ದೇವರೇ, ನನ್ನನ್ನು ಕ್ಷಮಿಸು, ನಾನು ಸುಳ್ಳು ಹೇಳಿದ್ದೇನೆ.
ಇನ್ನೊಂದು ದಿನ ಜೀವಿಸುವಂತೆ ಅವಕಾಶಕೊಡು.
    ಮತ್ತು ನಾನು ಪ್ರಾರ್ಥಿಸಿದ ರೀತಿಯಲ್ಲಿ ನಾನು ಜೀವಿಸುವೆನು!"

ತಿಳಿಯದ ಕರ್ತೃ

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬುವದಿಲ್ಲ.***
***ನಾನು ನಿನ್ನಲ್ಲಿ ನಂಬುತ್ತೇನೆ.***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

© 2009 Truth for Today